ಪ್ರಗತಿಯಲ್ಲಿದೆ.

ಕನ್ನಿಂಗ್ ಹ್ಯಾಂ ರಸ್ತೆಯ ಅಭಿವೃದ್ಧಿ ಬಗ್ಗೆ ಮಂಜೂರಾತಿ ಪಡೆದು ಗುತ್ತಿಗೆ ಕರೆಯಲಾಗುವುದು.

ಇ) ದೊಡ್ಡ ನಾಲಾ ದುರಸ್ತಿ ಕಾರ್ಯವು ಡಿಸೆಂಬರ್ 2004ರಲ್ಲಿ ಪೂರ್ಣಗೊಳ್ಳುವುದು. ಟಾಸ್ಕರ್ ಟೌನ್ ಆಟದ ಮೈದಾನದ ಕಾಮಗಾರಿಯನ್ನು 2002-03ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು. ಕನ್ನಿಂಗ್ ಹ್ಯಾಂ ರಸ್ತೆ ಕಾಮಗಾರಿಯನ್ನು ಡಿಸೆಂಬರ್ 2002ರಲ್ಲಿ ಪೂರ್ಣಗೊಳಿಸಲಾಗುವುದು.

ಚಿಂತಾಮಣಿ ನಗರಸಭೆ ವ್ಯಾಪ್ತಿಯಲ್ಲಿರುವ ಮುಳಬಾಗಿಲು ಗೌರಿಬಿದನೂರು ವರ್ತುಲ ರಸ್ತೆ ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 122(513)

ಸದಸ್ಯರ ಹೆಸರು: ಶ್ರೀ ಚೌಡರೆಡ್ಡಿ(ಚಿಂತಾಮಣಿ)

ಉತ್ತರಿಸುವ ಸಚಿವರು: ಶ್ರೀ ಎಂ.ಮಲ್ಲಿಕಾರ್ಜುನ ನಾಗಪ್ಪ(ಪೌರಾಡಳಿತ ರಾಜ್ಯ ಸಚಿವರು)

ಪ್ರಶ್ನೆ

1) ಚಿಂತಾಮಣಿ ನಗರಸಭೆ ವ್ಯಾಪ್ತಿಯಲ್ಲಿರುವ ಮುಳಬಾಗಿಲು ಗೌರಿಬಿದನೂರು ರಸ್ತೆ ನಗರ ಮಧ್ಯ ಭಾಗದಲ್ಲಿ ಹಾದು ಹೋಗುತ್ತಿದ್ದು ಈ ರಸ್ತೆಯಲ್ಲಿನ ಹೆಚ್ಚಿನ ವಾಹನ ಹಾಗೂ ಜನ ಸಂಚಾರ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ನಗರಾಭಿವೃದ್ಧಿ ಇಲಾಖೆಯಿಂದ ಈ ಸಂಬಂಧದಲ್ಲಿ ವರ್ತುಲಾಕಾರದ ರಸ್ತೆ ಮಾಡಲು ಮಂಜೂರಾತಿ ನೀಡಿರುವುದು ನಿಜವೇ?

3) ಹಾಗಿದ್ದಲ್ಲಿ ಈ ನಿಟ್ಟಿನಲ್ಲಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಉತ್ತರ

1) ಇಲ್ಲ.

2) ಇಂಥ ಪ್ರಸ್ತಾವನೆಗಳು ನಗರಾಭಿವೃದ್ಧಿ ಇಲಾಖೆಯಲ್ಲಿ ಇರುವುದಿಲ್ಲ.

3) ಉದ್ಭವಿಸುವುದಿಲ್ಲ.

ಚಿಂತಾಮಣಿ ನಗರಸಭೆ ವ್ಯಾಪ್ತಿಯಲ್ಲಿನ ರಸ್ತೆಗಳ ದುರಸ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 123(516)

ಸದಸ್ಯರ ಹೆಸರು: ಶ್ರೀ ಚೌಡರೆಡ್ಡಿ (ಚಿಂತಾಮಣಿ)

ಉತ್ತರಿಸುವ ಸಚಿವರು: ಶ್ರೀ ಮಲ್ಲಿಕಾರ್ಜುನ ನಾಗಪ್ಪ(ಪೌರಾಡಳಿತ ರಾಜ್ಯ ಸಚಿವರು)

ಪ್ರಶ್ನೆ

1) ಚಿಂತಾಮಣಿ ನಗರಸಭೆ ವ್ಯಾಪ್ತಿಯಲ್ಲಿ ನಗರಸಭೆಯಿಂದ ನೀರು ಸರಬರಾಜು ಪೈಪುಗಳು ಅಳವಡಿಸಿದ್ದು, ಅವುಗಳು ಅನೇಕ ಕಡೆ ಶಿಥಿಲಗೊಂಡು ರಸ್ತೆಗಳು ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಚಿಂತಾಮಣಿ ನಗರಸಭೆಯ ಆಯುಕ್ತರವರಿಗೆ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರ 4ನೇ ವಿಭಾಗ, ಲೋಕೋಪಯೋಗಿ ಇಲಾಖೆ, ಚಿಂತಾಮಣಿ ರವರು ದಿನಾಂಕ:29-8-2001 ಮತ್ತು 20-11-2001ರಲ್ಲಿ ಮೇಲೆ ನಮೂದಿಸಿರುವ ಬಗ್ಗೆ ಪತ್ರಗಳು ಬರೆದಿರುವುದು ನಿಜವೇ?

3) ಈ ಬಗ್ಗೆ ನಗರಸಭಾ ಆಯುಕ್ತರು ಏನು ಕ್ರಮ ತೆಗೆದುಕೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉತ್ತರ

1) ಹೌದು, ದೂರು ಅರ್ಜಿಗಳು ಬಂದ ಕೆಲಸಗಳನ್ನು ಪೂರೈಸಲಾಗಿದೆ.

2) ಹೌದು.

3) ಈ ಕುರಿತು ಆಯುಕ್ತರು ನ್ಯೂನತೆಗಳನ್ನು ಸರಿಪಡಿಸಲು ಕ್ರಮ ವಹಿಸಿರುತ್ತಾರೆ.

ಬಾಗೇಪಲ್ಲಿ ಹಾಗೂ ಗುಡಿಬಂಡೆ ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 124(517)